ಆಗಿಹೋದ ಮಹಾನುಭಾವರು ಮತ್ತು ಶತಮಾನಗಳ ಇತಿಹಾಸವಿರುವ ಒಂದೊಂದು ಧರ್ಮ ಸಂಗತಿಯೂ ಜಾತಿ ಮತ ಸ್ವರೂಪ ಪಡೆಯುತ್ತಿರುವ ಈ ದಿನಮಾನಗಳಲ್ಲಿ ನಿರ್ಮಲ ಧರ್ಮ ಎಂದರೆ ಯಾವುದು ಎಂಬುದನ್ನು ಹದಿಮೂರನೇ ಶತಮಾನದ ಕವಿ ಜನ್ನ ತನ್ನ ಕೃತಿಗಳಲ್ಲಿ ಹೇಳುತ್ತಿದ್ದಾನೆ ಎನಿಸುತ್ತದೆ. ಹಳಗನ್ನಡ ಓದುಗರಿಗೆಲ್ಲ ಪರಿಚಿತವೇ ಆಗಿರುವ ಜನ್ನನ 'ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ' ಎಂಬ ವಾಕ್ಯದ ನೆನಪಿನಿಂದಲೇ ಅವನ ಕೃತಿಗಳ ಒಂದೆರಡು ಸಂಗತಿಗಳನ್ನು ಚರ್ಚಿಸಬಹುದೆನಿಸುತ್ತದೆ.

ಧರ್ಮವೆಂಬುದು ಎಲ್ಲ ಮನುಷ್ಯ ಜೀವಗಳಲ್ಲಿ ಹುದುಗಿರಬಹುದಾದ ಸಂಗತಿ ಎಂದುಕೊಂಡರೆ ಜನ್ನ ಅದನ್ನು ಧವಳ ವಸ್ತ್ರವನ್ನುಟ್ಟು ಬಂದು ಹಿಂಸೆಗೆ ಸ್ವಲ್ಪವೂ ಅಳುಕದೆ ನಿಂತ ಇಬ್ಬರು ಹಸುಳೆಗಳ ರೂಪದಲ್ಲಿ ಕಂಡಿದ್ದಾನೆ. ಅಭಯರುಚಿ, ಅಭಯಮತಿ ಎಂಬ ಹೆಸರಿನ ಮಕ್ಕಳು ಹಿಂಸಾರಭಸ ಮತಿಯಾದ ಮಾರಿದತ್ತ ರಾಜನಿಗೆ ಧರ್ಮವೆಂದರೆ ಅದು ನಿರ್ಮಲ ಸ್ವರೂಪದ್ದು, ಅಹಿಂಸೆಯಿಂದ ಕೂಡಿದ್ದು ಎಂದು ಬೋಧಿಸುತ್ತಾರೆ. ಇದರೊಂದಿಗೆ ಸ್ತ್ರೀ ಪುರುಷ ಸಂಬಂಧಗಳು, ಅದರೊಳಗಿಂದಲೇ ಹುಟ್ಟಿಕೊಳ್ಳುವ ಸಂಘರ್ಷ ಇದರ ಸೂಕ್ಷ್ಮಗಳನ್ನೂ ತನ್ನ ಕಾವ್ಯ ಕಥನಗಳಲ್ಲಿ ವಿಸ್ತರಿಸಿರುವ ಜನ್ನ ಒಬ್ಬ ಪ್ರಾಜ್ಞ ಕವಿಯಂತೆ ತೋರುತ್ತಾನೆ.

ಮನುಷ್ಯವಾಸದ ಹೊರಜಗತ್ತಿನಲ್ಲಿ ದೊಡ್ಡದಾಗಿಯೇ ಎದ್ದು ಕಾಣುವ ಧರ್ಮ ಸ್ವರೂಪವನ್ನು ಕುರಿತಾದ ಚರ್ಚೆ, ಅದೇ ಸಕಲ ಜೀವ ಜಗತ್ತಿನೊಳಗೆ ಹೇಳದೇ ಕೇಳದೇ ತನ್ನಿಂದ ತಾನೇ ಅಂಟಿಕೊಂಡು ಬರುವ ಪ್ರೇಮ, ಕಾಮ ಸಂಗತಿಗಳನ್ನು ಏಕಕಾಲಕ್ಕೆ ಜನ್ನ ಜೀವರಾಶಿಯ ಒಂದೇ ಕಥನದಂತೆ ತನ್ನ ಮೂರೂ ಕೃತಿಗಳಲ್ಲಿ ನಿರೂಪಿಸುವುದನ್ನು ಗಮನಿಸಬೇಕು. ಅಂಥದೊಂದು ಭಾವವು,

ಪುದಿರ್ದಪುದೆಂತಾ ಪರಮಾತ್ಮಂ
ಹೃದಯಾಂಗಣದೊಳ್ ಗೂಢತೆಯಿಂದಂ
ಸುರತಿ ನಿಜ ಕಾಂತಾಕೃತ ಸೌಖ್ಯಂ
ಪುದಿರ್ದಪುದಾವಂ ನೆಱೆ ಕಾಣ್ಬಂ॥ ಎಂಬ ಈ ಪದ್ಯದಲ್ಲಿದೆ.

ಜೀವಜಗತ್ತನ್ನು ಅದು ಬದುಕಿರುವವರೆಗೂ ಕಾಡುವ ಎರಡು ತೀವ್ರ ಭಾವಗಳೆಂದರೆ ಮೊದಲನೆಯದು ಸ್ತ್ರೀ ಸಂಬಂಧದ ಮೋಹ, ಎರಡನೆಯದು ದೈವ ಸಂಬಂಧಿ ಭಕ್ತಿ. ಅನೇಕ ವೇಳೆ ಭಕ್ತಿಯೆಂಬುದು ಬಹಿರಂಗದ ತೋರಿಕೆಯಂತಿರಬಹುದು. ಆದರೆ ಮೋಹವೆಂಬುದು ಅಂತರಂಗದಲ್ಲಿ ತೀವ್ರ ಥರ ಕಾಯುವ ಬೆಂಕಿಯಂತೆ ಗೂಢ. ಈ ಪ್ರೇಮ, ಕಾಮದ ಉರುಬನ್ನು ತಗ್ಗಿಸಲೆಂದೇ ಕ್ರಮೇಣ ದೈವ, ಧರ್ಮ ಸಂಬಂಧಿ ಭಕ್ತಿ ಭಾವಗಳು ಹುಟ್ಟಿಕೊಂಡವು.

ಹಿಂಸೆ ಎಲ್ಲಿಂದ ಹುಟ್ಟಿಕೊಳ್ಳುತ್ತದೆ ಎಂದರೆ ಅದಕ್ಕೆ ದೈವ, ಧರ್ಮಗಳ ಕಾರಣವನ್ನೂ ಕೊಡಬಹುದು, ಸ್ತ್ರೀ ನಿಮಿತ್ತವನ್ನೂ ಹುಟ್ಟು ಹಾಕಬಹುದು. ಈ ಹಿನ್ನೆಲೆಯಲ್ಲಿ ಜನ್ನ 'ಅತ್ಯಂತ ಭೀಭತ್ಸುಗಾದ್ಯಂ ಮಾಯಾ ಮೋಹಾದಿ ದೇಹ ಪ್ರಕೃತಿ ತನುಗುಣಂ' ಎಂದಿದ್ದಾನೆ. ಅಂದರೆ ಜನಪದ ತತ್ವ ಪದಕಾರರು ಹೇಳುವಂತೆ ಕಬ್ಬಿಣದಿಂದ ಮಾಡಿದ ತಂತಿ ಸೋರೆ ಬುರುಡೆಯ ತಂಬೂರಿಯೊಂದಿಗೆ ಸೇರಿಕೊಂಡು ಆತ್ಮವನ್ನು ಮೀಟುತ್ತದೆ, ಅಂತರಂಗವನ್ನು ಮೇಲೇರಿಸುತ್ತದೆ. ಅದೇ ಕಬ್ಬಿಣದಿಂದ ತಯಾರಾದ ಕತ್ತಿಯು ದೇಹವನ್ನು ತುಂಡರಿಸಿ, ಭೂಮಿಗೆ ಚರಗ ಚಲ್ಲಿಬಿಡುತ್ತದೆ.

ಪಂಪ, ರನ್ನಾದಿಗಳು ತಮ್ಮ ಲೌಕಿಕ ಕಾವ್ಯಗಳೆನಿಸುವ ವಿಕ್ರಮಾರ್ಜುನ ವಿಜಯ, ಸಾಹಸಭೀಮ ವಿಜಯಗಳಲ್ಲಿ ಮನುಷ್ಯ ಮಾತ್ರರ ಪರಾಕ್ರಮ ಮತ್ತು ಅವರ ವಿಜಯಗಳನ್ನು ಚಿತ್ರಿಸಿದರೆ, ಅವರ ನಂತರದ ಇನ್ನೂರು ವರ್ಷಗಳಲ್ಲಿ ವಚನ ಚಳವಳಿಯ ನಂತರ ಬಂದ ಜನ್ನ ಅದೇ